# ಶ್ರೀಮಾತೆ ಶಾರದಾದೇವಿ

## (ಕೆಲವು ದೃಶ್ಯಾವಳಿಗಳು)

◆ ರಚನೆ: ಎಚ್.ವಿ. ಸರೋಜ ಚಿತ್ರಗಳು: ಶ್ರೀ ವಿಶ್ವರಂಜನ ಚಕ್ರವರ್ತಿ

ಪೀಠಿಕೆ

**[ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣರೊಂದಿಗೆ ಜಗದುದ್ಧಾರಕ್ಕಾಗಿ ಆಗಮಿಸಿದ ಅವರ ಶಕ್ತಿ. ಆಕೆ ಸರಸ್ವತಿಯಾಗಿ ಎಲ್ಲರಿಗೂ ವಿದ್ಯೆಯನ್ನು ದಯಪಾಲಿಸುತ್ತಾಳೆ, ಲಕ್ಷ್ಮಿಯಾಗಿ ಸಕಲ ಸಂಪತ್ತನ್ನು ಕರುಣಿಸುತ್ತಾಳೆ, ದುರ್ಗೆಯಾಗಿ ಕಷ್ಟಗಳನ್ನು ಪರಿಹರಿಸುತ್ತಾಳೆ, ನೊಂದವರಿಗೆ ದಾರಿದೀಪವಾಗುತ್ತಾಳೆ. ಪರಾಶಕ್ತಿಯೇ ಈಗ ವಾತ್ಸಲ್ಯಮಯಿಯಾಗಿ ಶ್ರೀಮಾತೆ ಶಾರದಾದೇವಿಯ ರೂಪ ತಾಳಿ ಬಂದಿದ್ದಾಳೆ. ಈಕೆ ಜಯರಾಂಬಾಟಿ ಎಂಬ ಒಂದು ಹಳ್ಳಿಯಲ್ಲಿ ೧೮೫೩ ಡಿಸೆಂಬರ್ ೨೨ರಂದು ಗುರುವಾರ ಕೃಷ್ಣಪಕ್ಷದ ಸಪ್ತಮಿಯ ಶುಭರಾತ್ರಿಯಂದು ರಾಮಚಂದ್ರ ಮುಖರ್ಜಿ ಮತ್ತು ಶ್ಯಾಮಾ ಸುಂದರೀ ಎಂಬ ಸಾತ್ವಿಕ ದಂಪತಿಗಳ ಜ್ಯೇಷ್ಠ ಪುತ್ರಿಯಾಗಿ ಜನಿಸಿದರು.]**

[ ಹಾಡು : *ದೊರಕಿತು ಧರಣಿಗೆ ಸಿರಿವರ ಇಂದು* ]

ದೃಶ್ಯ – ೧

ಶ್ಯಾಮಾಸುಂದರೀ ದೇವಿ ಶಿಹೋರಿನ ಜಾತ್ರೆಗೆ ಹೋಗಿ ಅಲ್ಲಿಂದ ಹಿಂದಿರುಗಿ ಬರುತ್ತಿರುವಾಗ, ವಿಶ್ರಮಿಸಿಕೊಳ್ಳಲು ಶಾಂತಿನಾಥನ ದೇವಸ್ಥಾನದ ಹತ್ತಿರವಿದ್ದ ಬಂದು ಬಿಲ್ವಮರದ ಕೆಳಗೆ ಕುಳಿತಿದ್ದಾಳೆ. ಕೆಂಪು ರೇಷ್ಮೆ ಸೀರೆಯುಟ್ಟ ೫ ವರ್ಷದ ಪುಟ್ಟ ಬಾಲಕಿ ಕಾಲಿನ ಗೆಜ್ಜೆಗಳ ಸದ್ದು ಮಾಡುತ್ತ ಬಂದಳು. ತನ್ನ ಮೃದುವಾದ ತೋಳುಗಳಿಂದ ಶ್ಯಾಮಾಸುಂದರಿಯ ಕೊರಳನ್ನು ತಬ್ಬಿಕೊಂಡಳು. ಆಕೆಗೆ ಪ್ರಜ್ಞೆ ತಪ್ಪಿತು.

ದೃಶ್ಯ – ೨

ರಾಮಚಂದ್ರ ಮುಖರ್ಜಿಯವರು ಕೆಲಸ ಹುಡುಕಿಕೊಂಡು ಕಲ್ಕತ್ತೆಗೆ ಬಂದಿದ್ದಾರೆ. ಆಯಾಸದಿಂದ ಒಂದೆಡೆ ಕುಳಿತಿದ್ದಾಗ ಅವರಿಗೆ ನಿದ್ದೆ ಹತ್ತಿದೆ. ಸ್ವಪ್ನದಲ್ಲಿ ಒಬ್ಬ ಸುಂದರ ಬಾಲಕಿ ಬಂದು ಅವರ ಕೊರಳನ್ನು ತಬ್ಬಿಕೊಂಡಳು.

**ರಾಮಚಂದ್ರ ಮುಖರ್ಜಿ :** ಮಗೂ, ಯಾರು ನೀನು?

**ಶಾರದೆ :** ಅಪ್ಪಾ, ನಾನು ನಿನ್ನ ಮನೆಗೆ ಬರುತ್ತೇನೆ.

[ಹೀಗೆ ಹೇಳಿ ಆ ಮಗು ಓಡಿಹೋಯಿತು.]

**ರಾ. ಮುಖರ್ಜಿ :** ಇದ್ಯಾರು, ಈ ಬಾಲಕಿ? ಅಹಾ! ಎಂತಹ ದಿವ್ಯ ಸೌಂದರ್ಯ. ಅವಳ ಉಡುಪು, ಅಷ್ಟು ಬೆಲೆ ಬಾಳುವ ಅವಳ ದಿವ್ಯಾಭರಣ ನೋಡಿದರೆ, ಆಕೆ ಸಾಮಾನ್ಯ ಬಾಲಕಿಯಲ್ಲ, ಸಾಕ್ಷಾತ್ ದೇವಿಯೇ ಇರಬೇಕು. ಆದರೆ, ನನ್ನ



ಮನೆಗೆ ಬರುತ್ತೇನೆ ಎಂದಳಲ್ಲ! ಏಕೆ?

*(ಯೋಚಿಸುತ್ತಾನೆ. ನಂತರ ಏಳುತ್ತಾನೆ.)*

ಓಹೋ! ಇದೆಲ್ಲಾ, ಒಂದು ಸ್ವಪ್ನವೇ? ಆದರೆ ಈ ಸ್ವಪ್ನ ನನಗೆಷ್ಟು ಆನಂದವನ್ನುಂಟುಮಾಡುತ್ತಿದೆ!

ದೃಶ್ಯ – ೩

**ರಾ.ಮುಖರ್ಜಿ :** ಶ್ಯಾಮಾ, ಶ್ಯಾಮಾ...

**ಶ್ಯಾಮಾಸುಂದರೀ :** ಓ, ಕಲ್ಕತ್ತಾದಿಂದ ಹಿಂದಿರುಗಿ ಬಂದುಬಿಟ್ಟಿರಾ? ಹೋದ ಕೆಲಸವೇನಾಯಿತು?

**ರಾ.ಮುಖರ್ಜಿ :** ಹೋದ ಕೆಲಸವೇನಾಗಲಿಲ್ಲ, ಶ್ಯಾಮಾ. ಆದರೆ ಅಲ್ಲಿ ಆದ ಒಂದು ಅನುಭವ ನನಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ.

**ಶ್ಯಾಮಾಸುಂದರೀ :** ಏನದು? ಎಂತಹ ಅನುಭವ?

**ರಾ.ಮುಖರ್ಜಿ :** ಆ ಬಿಸಿಲಲ್ಲಿ ಸುತ್ತಿ, ಸುತ್ತಿ, ಬಳಲಿ, ಒಂದು ಮರದ ನೆರಳಿನಲ್ಲಿ ಕುಳಿತಿದ್ದಾಗ, ಸುಮಾರು ಐದು ವರ್ಷದ ಸುಂದರ ಹುಡುಗಿ ಕೆಂಪುಸೀರೆ ಉಟ್ಟು, ಮೈ ತುಂಬ ಆಭರಣ ತೊಟ್ಟು, ನನ್ನ ಹತ್ತಿರ ಬಂದು, ನನ್ನ ಕೊರಳನ್ನು ತಬ್ಬಿಕೊಂಡು, ಅಪ್ಪಾ, ನಾನು ನಿನ್ನ ಮನೆಗೆ ಬರುತ್ತೇನೆ, ಎಂದು ಹೇಳಿ ಮಾಯವಾದಳು.

**ಶ್ಯಾಮಾಸುಂದರೀ :** ಹೌದಾ! ನನಗೂರೀ...

**ರಾ.ಮುಖರ್ಜಿ:** ತಾಳು. ಪೂರ್ತಿ ಕೇಳು. ಹ್ಞೂ, ಅವಳನ್ನು ನೋಡಿದರೆ ಆ ಮಗು ಸಾಧಾರಣ ಹುಡುಗಿಯಂತಿರಲಿಲ್ಲ. ಅಸಾಧಾರಣ ಸೌಂದರ್ಯ ಮತ್ತು ಆಭರಣಗಳಿಂದ ಕೋರೈಸುತ್ತಿದ್ದ ಆ ಹುಡುಗಿ ಸಾಕ್ಷಾತ್ ಲಕ್ಷ್ಮಿಯಂತಿದ್ದಳು. **ಹಾಂ, ನೀನು ಏನು ಹೇಳುತ್ತಿದ್ದೆ?**

ಬೆಂಗಳೂರಿನ ನಿವಾಸಿಯಾದ ಲೇಖಕಿ ಶ್ರೀಮಾತೆಯ ಜೀವನವನ್ನು ನಾಟಕರೂಪದಲ್ಲಿ ಪ್ರಸ್ತುತಪಡಿಸಿದ್ದಾರೆ. ಶಾಲ, ಕಾಲೇಜುಗಳಲ್ಲಿ ಇದು ಪ್ರಯೋಗಕ್ಕೆ ಯೋಗ್ಯ.



**ಶ್ಯಾಮಾಸುಂದರೀ**: ಏನು ವಿಚಿತ್ರ! ನನಗೂ ಅಂತಹುದೇ ಒಂದು ಅನುಭವ ಆಯ್ತೂರಿ. ಶಿಹೋರಿನ ಜಾತ್ರೆ ಮುಗಿಸಿ ಬರುತ್ತಿರುವಾಗ, ಆಯಾಸದಿಂದ ವಿಶ್ರಮಿಸಿಕೊಳ್ಳಲು ಒಂದು ಬಿಲ್ವಮರದ ಕೆಳಗೆ ಕುಳಿತಿದ್ದಾಗ, ನೀವು ವರ್ಣಿಸಿದಂತೆಯೇ ಇದ್ದ ಒಬ್ಬ ಹುಡುಗಿ ಬಂದು ನನ್ನ ಕೊರಳನ್ನು ತಬ್ಬಿಕೊಂಡಳು.

**ರಾ.ಮುಖರ್ಜಿ**: ನೀನೂ ಧನ್ಯೆ. ಹಾಗಾದರೆ ಇದು ನಿಜವಾದ ದರ್ಶನವೇ! ಕನಸಲ್ಲ. ಆಮೇಲೆ?

**ಶ್ಯಾಮಾಸುಂದರೀ** : ಆಮೇಲೇನಾಯಿತೋ ತಿಳಿಯದು ನನಗೆ. ನಾನು ಜ್ಞಾನತಪ್ಪಿ ಬಿದ್ದುಹೋಗಿದ್ದೆ. ಜಾತ್ರೆಗೆ ಬಂದಿದ್ದ ಬಂಧುಗಳು ನನ್ನನ್ನು ಆ ಸ್ಥಿತಿಯಲ್ಲಿ ನೋಡಿ, ಉಪಚರಿಸಿ ಮನೆಗೆ ಕರೆತಂದರು.

**ರಾ.ಮುಖರ್ಜಿ**: ಹಾಗಾದರೆ, ನಮ್ಮಿಬ್ಬರಿಗೂ ಒಂದೇ ದೇವಿಯ ದರ್ಶನವಾಗಿದೆ ಎಂದಾಯ್ತು.

**ಶ್ಯಾಮಾಸುಂದರೀ**: ಹೌದು. ಆದರೆ ಇದರ ಅರ್ಥವೇನಿರಬಹುದು?

**ರಾ.ಮುಖರ್ಜಿ**: ನನಗನ್ನಿಸುತ್ತಿದೆ, ಆ ದೇವಿಯೇ ನಮ್ಮ ಮನೆಯಲ್ಲಿ ಜನಿಸುತ್ತಾಳೆ, ಎಂದು.

**ಶ್ಯಾಮಾಸುಂದರೀ** : ಹೌದೆ! ಆಹಾ, ನಮ್ಮ ಭಾಗ್ಯವೇ!

**ರಾ.ಮುಖರ್ಜಿ**: ಇಂದಿನಿಂದ ನಾವಿಬ್ಬರೂ, ನೇಮದಿಂದ ಭಕ್ತಿಯಿಂದ ಅಕೆಗೆ ಸೇವೆ ಸಲ್ಲಿಸೋಣ, ಬಾ.

## ದೃಶ್ಯ – ೪

[ಶಾರದೆ ಸ್ನೇಹಿತೆಯರೊಂದಿಗೆ ಇದ್ದಾಳೆ]

**ಸ್ನೇಹಿತೆ** ೧ : ಏನೇ, ಶಾರದೆ, ಯಾವಾಗ ನಾವು ಆಟಕ್ಕೆ ಕರೆದರೂ, ನೀನು ಬರುವುದೇ ಇಲ್ಲ.

**ಶಾರದೆ** : ಏನು ಮಾಡಲೆ, ನನಗೆ ಒಂದಲ್ಲ ಒಂದು ಕೆಲಸವಿರುತ್ತೆ.

**ಸ್ನೇ.೨** : ಅಂತಹ ಕೆಲಸ ಏನು ಮಾಡ್ತೀಯೆ?



**ಶಾರದೆ** : ತಮ್ಮಂದಿರಿಗೆ ಸ್ನಾನ ಮಾಡಿಸುತ್ತೇನೆ, ತಿಂಡಿ ತಿನ್ನಿಸುತ್ತೇನೆ, ಶಾಲೆಗೆ ಬಿಟ್ಟು ಬರುತ್ತೇನೆ, ಗದ್ದೆಗೆ ಹೋಗಿ ಉದುರಿ ಬಿದ್ದ ಕಾಳು ಆರಿಸಿಕೊಂಡು ಬರುತ್ತೇನೆ.

**ಸ್ನೇ.೩**: ಏ, ನೀವು ನೋಡಿಲ್ವ? **ಶಾರದೆ** ಎಷ್ಟು ದಿವಸ ಮೊಣ ಕಾಲು ಉದ್ದ ನೀರಿನಲ್ಲಿ ಇಳಿದು ದನಕರುಗಳಿಗೆ ಹುಲ್ಲು ಕೊಯ್ದುಕೊಂಡು ಬರುತ್ತಿರುತ್ತಾಳೆ.

**ಸ್ನೇ.೧**: ಹೌದಲ್ಲ, ಅಬ್ಬ! ಎಷ್ಟು ಕೆಲಸ ಮಾಡ್ತೀಯಮ್ಮ ನೀನು. ನನಗಂತೂ ಆಗೋಲ್ಲ.

**ಶಾರದೆ** : ನನಗೆ, ಕೆಲಸ ಮಾಡೋದು ಅಂದರೆ ತುಂಬ ಇಷ್ಟ. ಆಲಸಿಯಾಗಿ ಇರುವುದಕ್ಕೆ ಆಗುವುದೇ ಇಲ್ಲ. ಇಷ್ಟಾನೂ ಇಲ್ಲ.

**ಸ್ನೇ.೨** : ನಡಿ, ಈ ಹೊತ್ತಾದರೂ, ನೀನು ನಮ್ಮ ಜೊತೆಯಲ್ಲಿದ್ದೀಯಲ್ಲ. ಆಟ ಆಡೋಣ.

**ಶಾರದೆ** : ಯಾವ ಆಟ ಆಡೋಣ?

**ಸ್ನೇ.೩** : ಬೊಂಬೆ ಆಟ ಆಡೋಣವಾ?

**ಶಾರದೆ** : ದೇವರ ಪೂಜೆ ಆಟ, ಧ್ಯಾನದ ಆಟ ಆಡೋಣ. ಬನ್ನಿ.

## ದೃಶ್ಯ – ೫

[ಕೆಲವು ಹೆಂಗಸರು ಮಾತನಾಡಿಕೊಳ್ಳುತ್ತಿದ್ದಾರೆ]

೧ : ಅಬ್ಬಾ ! ಏನು ಬರಗಾಲ ಬಂದಿತ್ತಪ್ಪ ನಮ್ಮ ಹಳ್ಳಿಗೆ.

೨ : ಎಷ್ಟು ದನಕರುಗಳು ಸತ್ತಿದ್ದು, ಎಷ್ಟು ಬಡವರು ಉಪವಾಸದಿಂದ ನರಳಿದ್ದು! ಸದ್ಯ ಕಡೆಗೂ ಮಳೆ ಬಂದು ಬರಗಾಲ ಪರಿಹಾರ ಆಯ್ತಲ್ಲ.

೩ : ರಾಮಚಂದ್ರ ಮುಖರ್ಜಿ ಮನೆಯವರು ಏನಾದರೂ ಬಡವರಿಗೆ ಊಟ ಹಾಕದೆ ಹೋಗಿದ್ದರೆ ನಮ್ಮ ಹಳ್ಳಿಯಲ್ಲಿ ಹೊಟ್ಟೆಗಿಲ್ಲದೇ ಎಷ್ಟು ಜನ ಸಾಯ್ತಾ ಇದ್ದರೋ?

೪ : ಹೌದಪ್ಪ, ಈ ಕಲಿಯುಗದಲ್ಲಿ ಅವರಂತಹ ಪುಣ್ಯಾತ್ಮರು ಇನ್ನು ಯಾರು ಇದ್ದಾರೆ. ಎಲ್ಲರೂ ತಮ್ಮ ಆಪತ್ಕಾಲಕ್ಕೆ ಇರಲಿ ಅಂತ ದವಸ ಧಾನ್ಯಗಳನ್ನು ದಾಸ್ತಾನಲ್ಲಿ ಶೇಖರಿಸಿಟ್ಟುಕೊಂಡಿರ್ತಾರೆ. ರಾಮಚಂದ್ರ, ಶ್ಯಾಮಾಸುಂದರೀ ದೇವಿ ತಮ್ಮ ಉಗ್ರಾಣದಲ್ಲಿದ್ದ ಅಕ್ಕಿಯನ್ನೆಲ್ಲಾ ತೆಗೆದು ದೊಡ್ಡ ದೊಡ್ಡ ಹಂಡೆಗಳಲ್ಲಿ ಗಂಜಿ ಮಾಡಿ ಊರಿನವರಿಗೆಲ್ಲಾ ಹಂಚಿದ್ದರಲ್ಲ! ಎಂತಹ ದೊಡ್ಡ ಮನಸ್ಸು ಅವರದು. ಸ್ವಾರ್ಥವೇ ಇಲ್ಲ!

೫ : ಅವರು ಮಾತ್ರ ಅಲ್ಲ, ಅವರ ಪುಟ್ಟ ಮಗಳು ಶಾರದೆ, ಇಷ್ಟು ಚಿಕ್ಕ ವಯಸ್ಸಿಗೇ ಎಷ್ಟು ತಿಳುವಳಿಕೆ ಅವಳಿಗೆ! ಹೊಟ್ಟೆ ಹಸಿವಿನ ಆತುರದಲ್ಲಿ ಜನ ಬಿಸಿಬಿಸಿ ಗಂಜಿ ಹಾಗೇ ಕುಡಿಯಲು ಹೋಗಿ ಕೈ ಬಾಯಿ ಸುಟ್ಟುಕೋಳ್ತಾರೆ ಅಂತ ಬೀಸಣಿಕೆ ಇಟ್ಟುಕೊಂಡು ಆ ಬಿಸಿ ಗಂಜಿಯನ್ನು ಆರಿಸಿಕೊಡ್ತಾ ಇದ್ದಳು ಕಣ್ರೀ.

೬ : ನಿಜವಾಗಲೂ ಅವರ ಕುಟುಂಬದವರೆಲ್ಲ

ಬಹಳ ಧಾರಾಳ.

೭ : ಬನ್ನಿ, ನಾವು ಬಂದು ಬಹಳ ಹೊತ್ತಾಯಿತು. ಬೇಗ ಬೇಗ ನೀರು ತುಂಬಿಸಿಕೊಂಡು ಹೋಗೋಣ.

### ದೃಶ್ಯ – ೬

[೨೩ ವರ್ಷದ ತರುಣ ಶ್ರೀರಾಮಕೃಷ್ಣರು ಕಾಳಿಯ ದರ್ಶನ ಪಡೆಯಬೇಕೆಂಬ ಹಂಬಲದಿಂದ ಹಗಲೂ ರಾತ್ರಿ 'ಅಮ್ಮ, ಅಮ್ಮ' ಎಂದು ಪರಿತಪಿಸುತ್ತಿದ್ದುದನ್ನು ಕಂಡು ಜನ ಅವರನ್ನು ಹುಚ್ಚರೆಂದು ಕರೆದರು. ಆ ಹುಚ್ಚನ್ನು ಬಿಡಿಸಲು ಅವರ ಅಣ್ಣ ಮತ್ತು ತಾಯಿ ಅವರಿಗೆ ಮದುವೆ ಮಾಡಲು ಹೆಣ್ಣು ಹುಡುಕಿ ವಿಫಲರಾದಾಗ, ಜಯರಾಂಬಾಟಿಯಲ್ಲಿ ರಾಮಚಂದ್ರ ಮುಖರ್ಜಿಯವರ ಮಗಳಾಗಿ ಬೆಳೆಯುತ್ತಿರುವ ಎಳೆಯ ೫ ವರ್ಷದ ಶಾರದೆಯನ್ನು ಕೇಳುವಂತೆ ಶ್ರೀರಾಮಕೃಷ್ಣರೇ ಅವರಿಗೆ ಸೂಚಿಸಿದರು. ಅಂತೆಯೇ ೨೩ ವರ್ಷದ ಗದಾಧರ ನಿಗೆ ೫ ವರ್ಷದ ಶಾರದೆಯನ್ನಿತ್ತು ವಿವಾಹವಾಯಿತು. ಮತ್ತೆ ಗದಾಧರ ಕಲ್ಕತ್ತಾಗೆ ಹೋದ ಮೇಲೂ ಹಳೆಯ ರೀತಿಯಲ್ಲೇ ಇರತೊಡಗಿದ. ಅವನ ದೇವರ ಹುಚ್ಚು ಹೋಗಲಿಲ್ಲ. ಹೀಗೆ ಗದಾಧರನಿಗೆ ಹುಚ್ಚು ಹಿಡಿದಿದೆ ಎಂಬ ವಾರ್ತೆ ಜಯರಾಂ ಬಾಟಿಯನ್ನು ತಲುಪಿತು. ಶಾರದೆಗೆ ಈಗ ೧೬ ವರ್ಷ ವಯಸ್ಸಾಗಿತ್ತು. ಈ ಸುದ್ದಿ ಅವಳನ್ನು ಚಿಂತೆಗೀಡುಮಾಡಿತು. ಒಂದು ದಿನ ನೀರು ತರಲು ಕೊಳಕ್ಕೆ ಹೋಗಿದ್ದಾಳೆ; ಅಲ್ಲಿ ಹೆಂಗಸರು ಈ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ]

೧ : ಅಲ್ಲ, ಪಾಪ, ರಾಮಚಂದ್ರ ಮುಖರ್ಜಿಯವರ ಮನೆಯಲ್ಲಿ ಈ ರೀತಿ ಆಗಬಾರದಾಗಿತ್ತು.

೨ : ಏನು, ಏನಾಯಿತು?

೩ : ಶಾರದೆಯ ಗಂಡ, ಕಲ್ಕತ್ತೆಯಲ್ಲಿದ್ದಾನಲ್ಲ, ಆವನಿಗೆ ಹುಚ್ಚಂತೆ!

೪ : ಅಯ್ಯೋ, ಹೌದೆ?

೫ : ನಮ್ಮ ಶಾರದೆ, ಎಂತಹ ಸುಗುಣಿ, ರೂಪವಂತೆ, ಗುಣವಂತೆ. ಅವಳಿಗೆ ಇಂತಹ ಗಂಡನೇ?

೬ : ಬಿಡು, ಅಷ್ಟೇ. ಇನ್ನು ಅವಳ ಜೀವಮಾನವೆಲ್ಲಾ ಗೋಳು. ದುಃಖಮಯ.

೭ : ಅಯ್ಯೋ, ಪಾಪ!

೮ : ಏ, ಅಲ್ಲಿ ನೋಡು, ಆವಳೇ ಬರುತ್ತಿದ್ದಾಳೆ. ಸುಮ್ಮನಿರು. [ಶಾರದೆ, ಕೇಳಿಸಿಕೊಂಡು, ಖಿನ್ನಮನಸ್ಕಳಾಗಿ ಹಿಂದಿರುಗಿದಳು.]

೯ : ಛೇ, ಪಾಪ.

### ದೃಶ್ಯ – ೭

[ಶಾರದೆಗೆ ಈ ವಾರ್ತೆ ಕೇಳಿದಾಗಿನಿಂದ ಪತಿಯನ್ನು ಕಾಣ ಬೇಕು, ಅವರಿಗೆ ನಿಜವಾಗಿ ಅಸ್ವಸ್ಥವಾಗಿದ್ದಲ್ಲಿ ಅವರ ಸೇವೆ ಮಾಡುವುದು ತನ್ನ ಧರ್ಮ, ಕರ್ತವ್ಯ. ಅದನ್ನು ಮಾಡ ಬೇಕೆಂಬ ಮನಸ್ಸು. ಅದಕ್ಕೆ ಸರಿಯಾಗಿ ಒಂದು ಅವಕಾಶ ಒದಗಿ ಬಂತು. ಶ್ರೀಕೃಷ್ಣ-ಚೈತನ್ಯರ ವಾರ್ಷಿಕ ಜನ್ಮ ದಿನೋತ್ಸವದ ಅಂಗವಾಗಿ ಗಂಗಾಸ್ನಾನ ಮಾಡಲು ಕೆಲವರು ಹೆಂಗಸರು ಕಲ್ಕತ್ತಾಗೆ ಹೊರಟಿದ್ದರು. ಶಾರದೆ ಅವರೊಂದಿಗೆ ಹೋಗುವುದಾಗಿ ಹೇಳಿದಾಗ, ರಾಮಚಂದ್ರ ಮುಖರ್ಜಿಗೆ ಮಗಳ ಅಪೇಕ್ಷೆ, ಉದ್ದೇಶ ಅರ್ಥವಾಯಿತು. ಸ್ವತಃ ತಾವೇ ಮಗಳನ್ನು ಕರೆದುಕೊಂಡು ಕೊಲ್ಕತಾಗೆ ನಡೆದರು. ಹಾಗೆ ಪ್ರಯಾಣಿಸುತ್ತಿರುವಾಗ ಜಾಸ್ತಿ ನಡೆದು ಅಭ್ಯಾಸವಿಲ್ಲದ ಶಾರದೆಗೆ ಜ್ವರ ಬಂದುದರಿಂದ ತಂದೆ ಮಗಳಿಬ್ಬರೂ, ಮಧ್ಯೆ ದಾರಿಯಲ್ಲಿ ನಿಲ್ಲಬೇಕಾಯಿತು. ಅಲ್ಲಿ ವಿಶ್ರಾಂತಿಗೃಹದಲ್ಲಿ ಮಲಗಿರುವಾಗ ಶಾರದೆಗೆ ಒಂದು ಅನುಭವವಾಯಿತು. ಸುಂದರ ಹೆಂಗಸೊಬ್ಬಳು ಅವರ ತಲೆ ಸವರುತ್ತಿದ್ದಾಳೆ]

**ಶಾ** : ಅಮ್ಮ, ಎಲ್ಲಿಂದ ಬಂದೆಯಮ್ಮ ನೀನು?

**ಹೆಂ** : ದಕ್ಷಿಣೇಶ್ವರದಿಂದ.

**ಶಾ** : ಹೌದೆ! ನಾನು ಅಲ್ಲಿಗೇ ಹೊರಟಿರುವುದು. ಆದರೆ ನನ್ನ ದುರದೃಷ್ಟ. ಜ್ವರ ಬಂದು ಮಲಗಿಬಿಟ್ಟೆ. ನಮ್ಮವರನ್ನು ನೋಡುತ್ತೇನೆಯೋ ಇಲ್ಲವೋ.

**ಹೆಂ** : ನೀನು ಏನೂ ಯೋಚನೆ ಮಾಡಬೇಡಮ್ಮ. ನೀನು ಬೇಗ ಗುಣಹೊಂದುತ್ತೀ. ನಿನ್ನ ಪತಿಯ ದರ್ಶನ ವನ್ನು ಪಡೆಯುವಿ. ನಿನಗಾಗಿ ಎಂದೇ ನಾನು ಅವರನ್ನು ಅಲ್ಲಿ ಇರಿಸಿದ್ದೇನೆ.



**ಶಾ** : ಹಾಗಾದರೆ ನೀನು ಯಾರು?

**ಹೆಂ** : ನಾನು ನಿನ್ನ ಸೋದರಿ.

**ಶಾ**: ಹೌದಾ! [ದಕ್ಷಿಣೇಶ್ವರದ ಕಾಳಿಯ ಚಿತ್ರ ತೆರೆಯ ಮೇಲೆ ಬರುವುದು]

[ಎದ್ದು] "ಅಯ್ಯೋ, ನನ್ನ ಅಕ್ಕ ಎಲ್ಲಿ ಹೋದಳು?" [ಹುಡುಕುತ್ತಾಳೆ] ಓಹೋ! ಇದೊಂದು ಸ್ವಪ್ನವೇ?

**ರಾಮಚಂದ್ರ ಮುಖರ್ಜಿ** : ಏನಮ್ಮ, ಎದ್ದೆಯಾ? ಹೇಗಿದ್ದೀಯೇ. [ಹಣೆ ಮುಟ್ಟಿ ನೋಡಿ] ಜ್ವರ ಇಳಿದಿದೆ.

**ಶಾ** : ಹೌದಪ್ಪ. ಇನ್ನು ಕಾಲಹರಣ ಮಾಡುವುದು ಬೇಡ. ಈಗಲೇ ಹೊರಡೋಣ.

**ರಾ.ಮುಖರ್ಜಿ** : ನೀನು ಸ್ವಲ್ಪವಾದರೂ ಸುಧಾರಿಸಿಕೊಳ್ಳ ಬೇಡವೇ, ಮಗು.

**ಶಾ : ಬೇಡಪ್ಪ**, ನನಗೇನೂ ಆಯಾಸವಿಲ್ಲ. ನಡೆ, **ಹೋಗೋಣ**.

**ರಾ.ಮುಖರ್ಜಿ** : ಆಹಾ. ಪತಿಯನ್ನು ನೋಡಲು ಏನು ಉತ್ಸುಕತೆ!

**ಶಾ** : ಹೋಗಪ್ಪ! (ನಾಚಿಕೆಯಿಂದ)

**ರಾ.ಮುಖರ್ಜಿ** : ನಡೆ. ದುರ್ಗಾದೇವಿಯೇ ನಮಗೆ ರಕ್ಷೆ.

[ಇಬ್ಬರೂ ದಕ್ಷಿಣೇಶ್ವರಕ್ಕೆ ಬರುತ್ತಾರೆ. ರಾಮಕೃಷ್ಣರ ಕೋಣೆಯಲ್ಲಿ ಅವರೊಂದಿಗೆ ಭೇಟಿಯಾಯಿತು. ಶಾರದೆ ರಾಮಕೃಷ್ಣರಿಗೆ ನಮಸ್ಕರಿಸುತ್ತಾಳೆ]

**ರಾ.ಕೃ** : ಹಾ! ಎಷ್ಟು ದೂರ ಬಂದಿದ್ದೀರಿ, ನನಗಾಗಿ! ಬನ್ನಿ, ಬನ್ನಿ. ಒಳ್ಳೆಯದು ಮಾಡಿದಿರಿ. ಹೃದಯ್, ಇವರಿಗೆ ಚಾಪೆ ಹಾಕು. ಪ್ರಯಾಣ ಸುಗಮವಾಗಿತ್ತೆ? ಏನೂ ತೊಂದರೆ ಯಾಗಲಿಲ್ಲ ತಾನೆ?

**ರಾ.ಮುಖರ್ಜಿ** : ಶಾರದೆಗೆ ದಾರಿಯಲ್ಲಿ ಜ್ವರ ಬಂದು ಬರಲು ಸ್ವಲ್ಪ ತಡವಾಯಿತು.

**ರಾ.ಕೃ** : ಹೌದೆ! ನೀವು ನನ್ನ ಮಥುರ ಇದ್ದಾಗ ಬಂದಿದ್ದರೆ ಎಷ್ಟು ಚೆನ್ನಾಗಿತ್ತು. ಅವನು ಶಾರದೆಯ ಶುಶ್ರೂಷೆಗೆ ಎಲ್ಲಾ ಏರ್ಪಾಡು ಮಾಡಿಬಿಡುತ್ತಿದ್ದ. ಅವನು ತೀರಿಕೊಂಡಿದ್ದರಿಂದ, ನನಗೆ ಬಲಗೈ ಮುರಿದಂತಾಗಿದೆ. ಚಿಂತೆ ಮಾಡಬೇಡಿ. ನಾಳೆ ಬೆಳಗ್ಗೆ ಒಳ್ಳೆ ವೈದ್ಯರನ್ನು ಕರೆಸಿ ಔಷಧಿ ಕೊಡಿಸುವೆ. ಈಗ ಬಹಳ ಹೊತ್ತಾಗಿದೆ. ಸ್ವಲ್ಪ ಫಲಾಹಾರ ಮಾಡಿ, ಮಲಗಿ ವಿಶ್ರಮಿಸಿಕೊಳ್ಳಿ.

## ದೃಶ್ಯ – ೮

[ಮತ್ತೊಂದು ಸಂದರ್ಭದಲ್ಲಿ ಶ್ರೀಶಾರದಾದೇವಿಯವರು ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಹೊರಟಿದ್ದಾರೆ. ಅವರೊಡನೆ ಇನ್ನೂ ಕೆಲವರು ಸ್ತ್ರೀಯರು ಇದ್ದಾರೆ. ಕತ್ತಲಾಗುತ್ತಾ ಬರುತ್ತಿದೆ. ಕಾಲ್ನಡಿಗೆಯ ಹಾದಿ. ಆ ಸ್ತ್ರೀಯರೆಲ್ಲಾ ಶಾರದಾದೇವಿಗೆ ಬೇಗ ಬೇಗ ನಡೆಯುವಂತೆ ಹೇಳುತ್ತಿದ್ದಾರೆ. ಆದರೆ ಶಾರದಾದೇವಿಗೆ ಜಾಸ್ತಿ ನಡೆದು ಅಭ್ಯಾಸವಿಲ್ಲದ ಕಾರಣ ಬೇಗ ಬೇಗ ನಡೆಯಲಾಗುತ್ತಿಲ್ಲ. ತಮ್ಮಿಂದ ಇತರರಿಗೆ ತೊಂದರೆಯಾಗಬಾರದೆಂದು ಶಾರದಾದೇವಿ ಅವರನ್ನೆಲ್ಲಾ ಮುಂದೆ ಹೋಗಲು ಹೇಳಿದರು. ಅಷ್ಟು ಹೇಳಿದ್ದೇ ಸಾಕು ಎಂದು ಆ ಹೆಂಗಸರು ಆಕೆಯನ್ನು ಆ ಕಾಡಿನಲ್ಲಿ ಒಂಟಿ ಯಾಗಿ ಬಿಟ್ಟು ಹೊರಟೇಹೋದರು. ಶಾರದಾದೇವಿ ಆ ಭಯಂಕರ ಕಾಡಿನಲ್ಲಿ ನಡೆದು ಬರುತ್ತಿದ್ದಾರೆ. ಆಗ ಇದ್ದಕ್ಕಿದ್ದಂತೆ ಒಬ್ಬ ಭಯಂಕರನಾದ ಡಕಾಯಿತ ಅವರಿಗೆ ಎದುರಾದ. ಆಜಾನುಬಾಹು, ಕಪ್ಪು ಬಣ್ಣ, ಕೈಯಲ್ಲಿ ದೊಣ್ಣೆ, ಮೈಮೇಲೆ ಕರೀಕಂಬಳಿ.]

**ಡಕಾಯಿತ** : ಏಯ್, ಯಾರಲ್ಲಿ? ನಿಲ್ಲು.

**ಶಾ** : ಹಾ! (ಭಯ, ಆತಂಕಗಳಿಂದ)

**ಡ** : ಯಾರು ನೀನು? ಏಕಿಲ್ಲಿ ಬಂದೆ?(ಅಷ್ಟರಲ್ಲಿ ಅವನ ಹೆಂಡತಿಯೂ ಬರುವಳು)

**ಶಾ** : (ಶಾಂತಭಾವದಿಂದ ನಸುನಗುತ್ತ ಡಕಾಯಿತನ ಕಣ್ಣುಗಳನ್ನೇ ದಿಟ್ಟಿಸುತ್ತ) ಅಪ್ಪಾ, ಅಮ್ಮಾ, ನಾನು ನಿಮ್ಮ ಮಗಳು, ಶಾರದೆ. ಸಂಗಡಿಗರೊಂದಿಗೆ ದಕ್ಷಿಣೇಶ್ವರಕ್ಕೆ ಹೊರಟಿದ್ದೆ. ನನ್ನ ನಡಿಗೆ ನಿಧಾನವಾಯ್ತು. ಅವರೆಲ್ಲ ಮುಂದೆ ನಡೆದದ್ದರಿಂದ ನಾನು ಒಂಟಿಯಾಗಿರುವೆ. ಸದ್ಯ, ನೀವು ಬಂದಿರಲ್ಲ ನನ್ನ ಜೊತೆಗೆ. ಇನ್ನೇನು ನನಗೆ ಭಯವಿಲ್ಲ.



**ಹೆಂಡತಿ** : (ವಾತ್ಸಲ್ಯ ಹಾಗೂ ಆಶ್ಚರ್ಯ ವ್ಯಕ್ತಪಡಿಸುತ್ತ) ಎಂತಹ ಮುಗ್ಧತೆ! ಮಗು! ಅವರೆಲ್ಲ ಹೋದರೇನಂತೆ. ಬಾ, ನಮಗೂ ಮಕ್ಕಳಿಲ್ಲ. ನೀನೇ ನಮ್ಮ ಮಗಳು. ಪ್ರಯಾಣದಿಂದ ಆಯಾಸ ಪಟ್ಟಿದ್ದೀಯೆ. ಸುಧಾರಿಸಿಕೊ.

[ತನ್ನ ಗಂಡನಿಗೆ] ಎಲ್ರಿ, ನಮ್ಮ ಮಗಳಿಗೆ ತಿನ್ನಲು ಏನನ್ನಾದರೂ ನೋಡಿ. ನಾನು ಅವಳಿಗೆ ಮಲಗಲು ಹಾಸಿಗೆ ಸಿದ್ಧಪಡಿಸುತ್ತೇನೆ.

**ಶಾರದಾದೇವಿ** : ಆಹಾ! ನನ್ನ ಅದೃಷ್ಟವೇ! ಅಮ್ಮ, ನಿಜ ವಾಗಿಯೂ ನನಗೆ ಹಸಿವೆಯಿಂದ ಬಳಲಿಕೆಯಾಗಿತ್ತು. ನೀವು ಬಂದದ್ದು ಎಷ್ಟು ಒಳ್ಳೆಯದಾಯಿತು.

**ಡಕಾಯಿತ** : ಬಾ, ಮಗು, ಈ ಕಾಳುಗಳನ್ನು ತಿನ್ನು. ಈ ನೀರು ಕುಡಿ.

**ಹೆಂ** : ಇಗೋ, ಇಲ್ಲಿ ಹಾಸಿದ್ದೇನೆ. ನಿಶ್ಚಿಂತೆಯಿಂದ ನಿದ್ರಿಸು, ಮಗು. ಬೆಳಗ್ಗೆ ನಾವೇ ನಿನ್ನನ್ನು ನಿನ್ನವರಲ್ಲಿಗೆ ಕರೆದೊಯ್ಯು ತ್ತೇವೆ.

**ಶಾ** : ಹಾಗೆ ಆಗಲಮ್ಮ.

[ಅಂತೆಯೇ ಆ ಡಕಾಯಿತ ದಂಪತಿಗಳು ಶಾರದೆಯನ್ನು ಮಗಳಂತೆ ಉಪಚರಿಸಿ, ಬೆಳಗ್ಗೆ ಅವಳ ಸಂಗಡಿಗರೊಂದಿಗೆ ಸೇರಿಸಿದರು]

**(ಮುಂದುವರೆಯುವುದು)**

**ಚೆನ್ನೈನ ಶ್ರೀರಾಮಕೃಷ್ಣ ಮಠದ ಸಭಾಂಗಣದಲ್ಲಿ ದಿವ್ಯತ್ರಯರ ಜೀವನಚರಿತ್ರೆ ಈ ಬಗೆಯ ಚಿತ್ರಗಳ ಮೂಲಕ ಬಿಂಬಿತವಾಗಿದೆ.**